**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 15/2020** **ಅ.ಸಾ. 15**

**ಚಾ.ಸಾ.38**

| | | |
|---|---|---|
| ಸಾಕ್ಷಿದಾರರ ಹೆಸರು | - | ವಿಶ್ವನಾಥ ಶೆಟ್ಟಿ |
| ತಂದೆಯ ಹೆಸರು | - | ಲೇಟ್ ಮಂಜುನಾಥ ಶೆಟ್ಟಿ |
| ವಯಸ್ಸು | - | 36 ವರ್ಷ |
| ಉದ್ಯೋಗ | - | ಪಿ.ಸಿ. |
| ವಿಳಾಸ | - | ಉಡುಪಿ ನಗರ ಠಾಣೆ. |

ದಿನಾಂಕಃ 04-04-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು 2017 ನೇ ಸಾಲಿನಿಂದ ಉಡುಪಿ ನಗರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಪ್ರಕರಣದ ತನಿಖಾಧಿಕಾರಿ ನನ್ನನ್ನು ಪ್ರಕರಣದ ಬಗ್ಗೆ ಛಾಯಾ ಚಿತ್ರ ತೆಗೆಯಲು ಕರೆದಿದ್ದು ದಿನಾಂಕ 08-07-2020 ರಂದು ನನಗೆ ಸೇರಿದ ಸ್ವಂತ ಕ್ಯಾಮರಾ ಸಮೇತ ತನಿಖಾಧಿಕಾರಿಯೊಂದಿಗೆ ಆರೋಪಿಯು ತೋರಿಸಿಕೊಟ್ಟಂತೆ ತಯಾರಿಸಿದ ಸ್ಥಳ ಮಹಜರು ಮತ್ತು ಸೊತ್ತು ಸ್ವಾಧೀನತಾ ಮಹಜರಿನ ಸಮಯದಲ್ಲಿ ಛಾಯಾ ಚಿತ್ರ ತೆಗೆದಿರುತ್ತೇನೆ. ನಂತರ ಅವುಗಳನ್ನು ಸಿಡಿ ಗೆ ವರ್ಗಾಯಿಸಿ ತನಿಖಾಧಿಕಾರಿಗೆ ನೀಡಿರುತ್ತೇನೆ. ಈ ಬಗ್ಗೆ ನಾನು ಕಲಂ 65 ಬಿ ಸಾಕ್ಷ್ಯ ಅಧಿನಿಯಮದಡಿ ದೃಢ ಪತ್ರ ನೀಡಿರುತ್ತೇನೆ. ಸದ್ರಿ ದೃಢ ಪತ್ರವನ್ನು ನಿಪಿ.60 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.60(ಎ) ಎಂದು ಗುರುತಿಸಲಾಯಿತು. ಕ್ಯಾಮರಾವನ್ನು ನಾನು ಉಪಯೋಗಿಸುತ್ತಿದ್ದು ಅದು ಸುಸ್ಥಿತಿಯಲ್ಲಿತ್ತು. ಛಾಯಾ ಚಿತ್ರಗಳನ್ನು ಈಗಾಗಲೇ ನಿಪಿ-32, 33, 35, 36, 38, 40, 41, 43, 44 ಎಂದು ಗುರುತಿಸಲಾಗಿದೆ.

**<u>1 ರಿಂದ 3 ನೇ ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ. ಎಂ.ಎಸ್.ಎಸ್. ವಕೀಲರಿಂದ</u>**

ದಿನಾಂಕ 13-07-2020 ರಂದು ಸಿಡಿಗೆ ಛಾಯಾ ಚಿತ್ರಗಳನ್ನು ವರ್ಗಾಯಿಸಿ ಕೊಟ್ಟಿರುತ್ತೇನೆ. ನಂತರ ಕ್ಯಾಮರಾ ನನ್ನ ವಶದಲ್ಲಿ ಇತ್ತು. ಆ ಕ್ಯಾಮರಾ ಈಗಲೂ ನನ್ನ ಬಳಿ ಇದೆ. ತನಿಖಾಧಿಕಾರಿ ಛಾಯಾ ಚಿತ್ರಗಳನ್ನು ಎಲ್ಲಿ ಪ್ರಿಂಟ್ ತೆಗೆಸಿದ್ದಾರೆ ಎಂದು ಗೊತ್ತಿಲ್ಲ. ಸಿಡಿ ಯಲ್ಲಿರುವ ಛಾಯಾ ಚಿತ್ರಗಳನ್ನು ಅಡಿಟ್ ಮಾಡಿದ್ದಾರೋ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಹೇಳುವ ರೀತಿ ನನ್ನ ಕ್ಯಾಮರಾದಲ್ಲಿ ಛಾಯಾ ಚಿತ್ರಗಳನ್ನು ತೆಗೆದೇ ಇಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.